ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ16-12-2025 ರಂದು ಬೊಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ಶ್ರೀ ಆರ್ ಆರ್ ಹೆಚ್ ವಕೀಲರಿಂದಃ

25. ದಿಃ 15-03-2019 ರಂದು 4 ನೇ ಪ್ರತಿವಾದಿ ಕಟ್ಟಡ ಕಟ್ಟುವುದನ್ನು ನನಗೆ ನೋಟೀಸ ನೀಡಿದ್ದು ಎಂದು ಸರಿ. ಸ್ದ್ರಿ ನೋಟೀಸ ನೀಡಿದ ನಂತರವೂ ಸಹ ಸ್ದ್ರಿ ಕಟ್ಟಡದ ಕಾಮಗಾರಿ ನಿಲ್ಲಿಸಿದ ಕಾರಣ 4 ನೇ ಪ್ರತಿವಾದಿಯರು ಸ್ಥಳ ಪರಿಶೀಲನೆ ಮಾಡಿ ಮೌಖಿಕವಾಗಿ ಸದರಿ ಕಟ್ಟಡದ ಕಾಮಗಾರಿಯನ್ನು ನಿಲ್ಲಿಸುವಂತೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

26. ಸದರಿ ಕಟ್ಟಡದ ಕಾಮಗಾರಿಯಿಂದ ಜನ ಸಾಮಾನ್ಯರಿಗೆ ತೊಂದರೆಯಾಗುತ್ತಿದ್ದರಿಂದ ಸ್ದ್ರಿ ಕಟ್ಟಡದ ಕಾಮಗಾರಿಯನ್ನು ನಿಲ್ಲಿಸಲು ನನಗೆ ತಿಳಿಸಿದ್ದರೂ ಎಂದರೆ ಸರಿಯಲ್ಲ.

27. ದಾವಾಸ್ತಿಯಲ್ಲಿ ಫಾರ್ಮ ಹೌಸ ನಿರ್ಮಿಸುವ ಬಗ್ಗೆ 4 ನೇ ಪ್ರತಿವಾದಿಯಿಂದ ಯಾವುದೇ ಪರವಾನಿಗೆ ಪಡೆದಿಲ್ಲ.

27. ತಾಲೂಕು ಪಂಚಾಯತನ ಉಪ ಸಮೀತಿ ದಾವಾಸ್ತಿಗೆ ಸಂಬಂದಿಸಿದಂತೆ ಸ್ಥಳ ಪರೀಶಿಲನೆ ಮಾಡಿರುತ್ತಾರೆ. ಸ್ದ್ರಿ ಉಪ ಸಮೀತಿ ಯವರು ನೀಡಿರುವ ವರದಿಗೆ ನಾನು ಯಾವುದೇ ತಕರಾರು ಸಲ್ಲಿಸಿಲ್ಲ.

28. ನಾನು ದಾವಾಸ್ತಿಯಲ್ಲಿ 4 ನೇ ಪ್ರತಿವಾದಿಯಿಂದ ಕಟ್ಟಡಕ ಕಟ್ಟಲು ಪೂರ್ವಾನುಮತಿ ಪಡೆಯದೇ ಇರುವುದರಿಂದ ಸ್ದ್ರಿ ಕಟ್ಟಡದ ಸಂಬಂದಿಸಿದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲವ ಅಧಿಕಾರ 4 ನೇ ಪ್ರತಿವಾದಿಗೆ ಇರುತ್ತದೆ ಎಂದರೆ ಸರಿಯಲ್ಲ.

29. ಈ ದಾವೆ ಸಲ್ಲಿಸುವ ಪೂರ್ವದಲ್ಲಿ 4 ನೇ ಪ್ರತಿವಾದಿಗೆ ನೋಟೀಸ ನೀಡಿರುತ್ತೇನೆ ಇಲ್ಲವೂ ನನಗೆ ಈಗ ಹೇಳಲಾಗುವುದಿಲ್ಲ.



30. ದಿಃ 21-03-2019 ರಂದು ದಾವಾ ಆಸ್ತಿಗೆ ಸಂಬಂದಿಸಿದಂತೆ ಯಾರು ನೋಟೀಸ ಕೊಟ್ಟಿರುತ್ತಾರೆ ಎಂದು ನನಗೆ ಈಗ ಹೇಳಲಾಗುವುದಿಲ್ಲ.

31. ನಾನು ಕಟ್ಟುತ್ತಿರುವ ಫಾರ್ಮ ಹೌಸ 5 ರಿಂದ 10 ನೇ ಪ್ರತಿವಾದಿಯ ಆಸ್ತಿಗಳಿಗೆ ಹೊಂದಿಕೊಂಡಂತೆ ಇರುವುದಿಲ್ಲ.

32. ನಾನು ಈ ದಾವೆಯ ಜೊತೆ ಹಾಜರುಪಡಿಸಿರುವ ಕಚ್ಚಾ ಹಾತ ನಕಾಶೆಯಲ್ಲಿ ದಾವಾಸ್ತಿ ಮತ್ತು 5 ರಿಂದ 10 ನೇ ಪ್ರತಿವಾದಿಗಳ ಆಸ್ತಿ ಒಂದಕ್ಕೊಂದು ಒಟ್ಟಿಗೆ ಕೂಡಿಕೊಂಡಿರುವ ಬಗ್ಗೆ ತೋರಿಸಿರುತ್ತೇನೆ ಎಂದರೆ ಸರಿ.

33.ನಾನು ಈ ದಾವೆಯ ಜೊತೆ ಹಾಜರುಪಡಿಸಿರುವ ಕಚ್ಚಾ ಹಾತ ನಕಾಶೆಯಲ್ಲಿ ತೋರಿಸಿದ ಆಸ್ತಿಗಳಲ್ಲಿ ನಾನು ಕಟ್ಟಿರುವ ಪಾರ್ಮ ಹೌಸ ಬಗ್ಗೆ ತೋರಿಸಿರುತ್ತೇನೆ.

34. ನಾನು ಕಟ್ಟುತ್ತಿರುವ ಪಾರ್ಮ ಹೌಸ ಮತ್ತು 5 ರಿಂದ 10 ನೇ ಪ್ರತಿವಾದಿಗಳ ಆಸ್ತಿ ಒಂದೇ ರೋಪ್ ನಲ್ಲಿ ಬರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದುಕ ನಾವು ಪ್ರತ್ಯೇಕವಾಗಿ ಮಾಡಿರುತ್ತೇವೆ ಎಂದುನುಡಿಯುತ್ತಾರೆ . ಸದ್ರಿ ರೂಪ್ ನಲ್ಲಿ ಪ್ರತ್ಯೇಕವಾಗಿ ಮಾಡುವ ಕಾಲಕ್ಕೆ 5 ರಿಂದ 10 ನೇ ಪ್ರತಿವಾದಿಯ ಯಾವುದೇ ಒಪ್ಪಿಗೆಯನ್ನು ಪಡೆದಿಲ್ಲ.

35. ದಾವಾಸ್ತಿಗೆ ಸಂಬಂದಿಸಿದಂತೆ 5 ರಿಂದ 10 ರ ಪ್ರತಿವಾದಿಗಳ ಆಸ್ತಿಗಳಿಗೆ ಸಂಬಂದಿಸಿದಂತೆ ವಿಭಾಗವನ್ನು ಮಾಡಿಕೊಂಡಿರುತ್ತೇವೂ ಇಲ್ಲವೂ ಎಂದು ನನಗೆ ಗೊತ್ತಿಲ್ಲ.

36. 4 ನೇ ಪ್ರತಿವಾದಿಯ ಅಧಿಕಾರವನ್ನು ಮೊಟಕುಗೊಳಿಸಲು ಈ ದಾವೆಯನ್ನು 4 ನೇ ಪ್ರತಿವಾದಿಯ ವಿರುದ್ದ ಹೂಡುವ ಯಾವುದೇ ಹಕ್ಕು ಅಧಿಕಾರ ನನಗೆ ಇಲ್ಲ ಎಂದರೆ ಸರಿಯಲ್ಲ.

37. 4 ನೇ ಪ್ರತಿವಾದಿಯಿಂದ ಯಾವುದೇ ವ್ಯಾಜ್ಯ ಕಾರಣ ಉಂಟಾಗದೇ ಇದ್ದರು ಸಹ 4 ನೇ ಪ್ರತಿವಾದಿಯ ವಿರುದ್ದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.



38. 4 ನೇ ಪ್ರತಿವಾದಿಯಾದ ವಿರುದ್ದ ಈ ದಾವೆಯನ್ನು ಸಲ್ಲಿಸಿರುವುದರಿಂದ 4 ನೇ ಪ್ರತಿವಾದಿಗೆ ನೀಡಲು ಬಾಧ್ಯಸ್ಥನಾಗಿರುತ್ತೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ 5 ರಿಂದ 10 ನೇ ಪ್ರತಿವಾದಿಯ ಪರ ವಕೀಲರು ಪಾಟೀಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ,

ಸಹಿ ಇದೆ
ಸಿವಿಲ್ ನ್ಯಾಯಾಧೀಶರು ಸಿದ್ದಾಪುರ